**ತಂದೆ ತಾಯಿ ತೀರಿಕೊಂಡ ಮೇಲೆ ಮೂವರು ತಂಗಿಯರಿಗೆ ಹಿರಿಯಕ್ಕ ಭಾಗ್ಯನೇ ತಾಯಿ, ತಂದೆಯಾದಳು. ಹಲ್ಲು ಕಚ್ಚಿ ನೊಗ ಎಳೆಯುವಂತೆ ಮಾಡಿದ್ದು ಅವಳ ಅಂತಃಶ್ಶಕ್ತಿ. ಅವಳ ಇಚ್ಛಾಶಕ್ತಿ. ಒಂದು ಬಾಗಿಲು ಮುಚ್ಚಿತು ಎನ್ನುವಾಗಲೇ ಇನ್ನೊಂದು ತೆರೆದುಕೊಂಡಿತು. ತಂದೆಯದಾಗಿದ್ದ ಕೆಲಸ ಭಾಗ್ಯನಿಗೆ ದಕ್ಕಿತು.**

ಕರಗಿ ಹೋಯ್ತು. ನಂತರವಾದರೂ ತನ್ನ ಬಗ್ಗೆ ಯೋಚಿಸಬಹುದಿತ್ತು ಭಾಗ್ಯ. ಆದರೆ ಮಾಡಿ ಮುಗಿಸಬೇಕಾದ ಜವಾಬ್ದಾರಿ ಇನ್ನೂ ಉಳಿದಿದೆ ಅಂದುಕೊಂಡಳೋ, ಅಥವಾ ಮದುವೆಯ ಬಗ್ಗೆ ಅವಳಲ್ಲಿ ನಿರಾಸಕ್ತಿ ಬೆಳೆದುಬಿಟ್ಟಿತ್ತೋ, ಒಟ್ಟಿನಲ್ಲಿ ಮದುವೆಗೆ ಮನಸ್ಸು ಮಾಡಲಿಲ್ಲ. ಅಕ್ಕನ ತ್ಯಾಗದ ಕುರಿತು ವನಿತನಿಗೆ ಮೆಚ್ಚುಗೆ, ಕೃತಜ್ಞತೆ, ಅಭಿಮಾನ. 'ತನ್ನ ಮದುವೆ ಕೂಡಾ ಸಲೀಸಾಗಿ ನಡೆದು ಹೋಗುತ್ತದೆ' ಎಂದು ವನಿತಾ ಕನಸು ಕಾಣುವುದಕ್ಕೆ ಯಾವುದೇ ಅಡ್ಡಿ ಇರಲಿಲ್ಲ. ಮದುವೆ ಮಾಡಿಕೊಂಡು ಹೋದ ಅಕ್ಕಂದಿರು ಯಾವ್ಯಾವುದೋ ಪ್ರಸ್ತಾಪ ತರುತ್ತಿದ್ದರು. 'ಗೊತ್ತಿರೋ ಜನ ಅಕ್ಕಾ, ಈಗ ಹುಡುಗಿಯರು ಸಿಗೋದೇ ಕಷ್ಟ ಅಂತಾಗಿದೆಯಲ್ಲ, ಮನಸ್ಸು ಮಾಡಿದ್ರೆ ನೀನೂ...' ಎನ್ನುತ್ತಾ ಅರ್ಧೋಕ್ತಿಯಲ್ಲಿ ಮಾತು ನಿಲ್ಲಿಸುತ್ತಿದ್ದವರನ್ನು ಕನಸುಗಣ್ಣುಗಳಿಂದ ನೋಡುತ್ತಿದ್ದಳು ವನಿತಾ. ಅಕ್ಕ ಕೂಡಾ ಮದುವೆಯಾಗಿ ಅವಳದು ಎನ್ನುವ ಸ್ವಂತ ಸಂಸಾರ ಇರುವಂತಾದರೆ ಎಷ್ಟು ಚೆನ್ನ ಎಂದುಕೊಳ್ಳುತ್ತಾ ತನ್ನ ಕನಸಿನೊಂದಿಗೆ ಅಕ್ಕನ ಕನಸನ್ನೂ ಜೋಡಿಸಿಕೊಂಡು ಮನೆಯ ನೀರವತೆಯಲ್ಲಿ ಕಳೆದು ಹೋಗುತ್ತಿದ್ದವಳಿಗೆ ಈ ಕನಸು ಹಗಲುಗನಸಾಗಿ ಉಳಿದು ಹೋಗುತ್ತದೆಯೇನೋ ಎನ್ನುವ ಸಂದೇಹವನ್ನು ಹುಟ್ಟು ಹಾಕಿದ್ದು ತಮ್ಮಷ್ಟಕ್ಕೆ ಕಳೆದು ಹೋಗತೊಡಗಿದ ವರ್ಷಗಳು. ಯಾವೊಂದು ಹೊಸ ನಿರೀಕ್ಷೆಗೂ ಇಂಬು ಕೊಡದೆ ಏಕತಾನತೆಯಿಂದ ಸರಿದು ಹೋಗುತ್ತಿದ್ದ ದಿನಗಳು.

★★★

'ನಂಗೆ ಮದುವೆ ಮಾಡಲ್ವಾ ಅಕ್ಕ?' ವನಿತನ ಗಂಟಲಲ್ಲಿದ್ದ ಮಾತು ಬಾಯಿಗೆ ಬರುತ್ತಿರಲಿಲ್ಲ. ಅಕ್ಕ ಸನ್ಯಾಸಿನಿಯಂತೆ ಜೀವನ ಕಳೆಯುತ್ತಿರುವಾಗ ತಾನು ಮಾತ್ರ ಲಜ್ಜೆ ಬಿಟ್ಟು ಇಂತಾ ಮಾತಾಡುವುದು ಸಹಜವಾಗಿಯೇ ಮುಜುಗರ ಅನಿಸುತ್ತಿತ್ತು. 'ಏನಿದೆ ಅಕ್ಕನ ಮನಸ್ಸಿನಲ್ಲಿ?' ಗೊತ್ತಾಗದ ನಿಗೂಢ. ಮನಸ್ಸು ಮಾಡಿದರೆ ಈ ತಂಗಿಯ ಮದುವೆಯನ್ನೂ ಮಾಡಿ ಸಮಾಜದಿಂದ ತ್ಯಾಗಮಯಿಯ ಪಟ್ಟ ದೊರಕಿಸಿಕೊಳ್ಳುವುದು ಅವಳಿಗೆ ಕಷ್ಟವೇನಲ್ಲ. ಆದರೆ ಬಾಯಿಗೆ ಕಡುಬು ತುರುಕಿಕೊಂಡಂತೆ ಬಿಗುವಾಗಿದ್ದಾಳೆ ಭಾಗ್ಯ. ಮೊದಮೊದಲು ಈ ಸಂಗತಿಯ ಕುರಿತು ಮಾತಾಡಲು ಉತ್ಸಾಹ ತೋರಿಸುತ್ತಿದ್ದ ತಂಗಿಯರು ಅಕ್ಕನ ಮನದಾಳ ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾದ ನಂತರ ಅನಿವಾರ್ಯವಾಗಿ ಆ ವಿಷಯ ಮಾತಾಡುವುದನ್ನು ಬಿಟ್ಟುಬಿಟ್ಟರು. ಅವರವರ ಸಂಸಾರಕ್ಕೆ ಹೆಚ್ಚಿನ ಗಮನ, ಆದ್ಯತೆ ಕೊಡಬೇಕಾಗಿ ಬಂದಂತೆ ತೌರುಮನೆಗೆ ಅವರು ಬರುವುದು ಕಮ್ಮಿಯಾಗುತ್ತಾ ಬಂತು. ಒಂದೊಂದು ವರ್ಷದ ಹುಟ್ಟುಹಬ್ಬ ಕಳೆದಾಗಲೂ ಅಷ್ಟಷ್ಟು ಮದುವೆ ಅನ್ನುವ ಮೂರಕ್ಷರ ತನ್ನಿಂದ ದೂರದೂರವಾಗುತ್ತಿದೆ ಎಂದು ವನಿತಾ ವ್ಯಗ್ರಳಾಗತೊಡಗಿದಳು. ಹೀಗಿರುವಾಗ ಅವನೊಬ್ಬ ಕಾಡತೊಡಗಿದ್ದಾನೆ ಕಳೆದೆರಡು ವರ್ಷಗಳಿಂದ. ಅವನಿಗೆ ಒಂದೊಮ್ಮೆ ಮದುವೆಯಾಗಿಲ್ಲದಿದ್ದರೆ ವನಿತಾ ಅವನ ಕಡೆ ಆಕರ್ಷಿತಳಾಗುವ ಸಾಧ್ಯತೆ ಇರುತ್ತಿತ್ತೇನೋ. ಆದರೆ ಮಹಾಶಯ ಎರಡು